

ನ್ಯೂಯಾರ್ಕ್‌ನ ವಿಶ್ವವಿದ್ಯಾನಿಲಯದ ನೋಟ

ಅತ್ತ ವೈಟ್‌ಹೌಸ್‌ಗೆ ತಮ್ಮ ವಾಸ್ತವ್ಯ ಬದಲಿಸಲು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧತೆ ನಡೆಸಿದ್ದರೆ, ಇತ್ತ ಆ ದೇಶಕ್ಕೆ ಉನ್ನತ ವ್ಯಾಸಂಗಕ್ಕಾಗಿ ಹೋಗಲು ಸನ್ನದ್ಧರಾಗಿದ್ದ ಭಾರತೀಯ ವಿದ್ಯಾರ್ಥಿಗಳು ಬೇರೆ ದೇಶಗಳ ವೀಸಾ ಪಡೆಯಲು ಸರದಿಯಲ್ಲಿ ನಿಂತಿದ್ದಾರೆ! ಹೌದು, ಕೋಟ್ಯಂತರ ಡಾಲರ್ ಆದಾಯ ಹರಿಸಿಕೊಂಡು ಬರುವ ಭಾರತೀಯ ವಿದ್ಯಾರ್ಥಿಗಳಿಗಾಗಿ ತೆರೆದ ಬಾಗಿಲಿನಿಂದ ಕಾಯುವ ಅಮೆರಿಕದ ವಿಶ್ವವಿದ್ಯಾಲಯಗಳನ್ನೀಗ ಕೇಳುವವರೇ ಇಲ್ಲ. ಹೊಸ ಶೈಕ್ಷಣಿಕ ವರ್ಷದ ಪ್ರವೇಶಕ್ಕಾಗಿ ವಿದೇಶಿ ವಿದ್ಯಾರ್ಥಿಗಳಿಂದ ತುಂಬಿರುತ್ತಿದ್ದ ಅಲ್ಲಿನ ಪ್ರಮುಖ ಕ್ಯಾಂಪಸ್ಸುಗಳು ಭಣಗುಡುತ್ತಿವೆ!

ತಮ್ಮ ಹರಕು ಬಾಯಿಯಿಂದ, ಗೊಂದಲಮಯ ಹೇಳಿಕೆಗಳಿಂದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದ ಶೈಕ್ಷಣಿಕ ಜಗತ್ತಿನಲ್ಲಿ ಬಹುದೊಡ್ಡ ತಲ್ಲಣ ಉಂಟು ಮಾಡಿದ್ದಾರೆ. ವಾರ್ಷಿಕ 3,500 ಕೋಟಿ ಡಾಲರ್‌ನಷ್ಟು ಆದಾಯ ತರುವ ಅಲ್ಲಿನ ಶೈಕ್ಷಣಿಕ ಉದ್ಯಮದಲ್ಲಿ ‘ಲಘು ಭೂಕಂಪ’ವಾಗಿದೆ. ಭಾರತ ಮಾತ್ರವಲ್ಲ, ಚೀನಾ, ದಕ್ಷಿಣ ಕೊರಿಯಾ, ಸೌದಿ ಅರೇಬಿಯಾ ಮೊದಲಾದ ದೇಶಗಳ ವಿದ್ಯಾರ್ಥಿಗಳಿಗೆ ಕಳೆದ ವರ್ಷದವರೆಗೆ ಅಮೆರಿಕ ಬಲು ನೆಚ್ಚಿನ ತಾಣವಾಗಿತ್ತು. ಈಗ ಅವರೆಲ್ಲ ಆ ದೇಶಕ್ಕೆ ಹೋಗಲು ಹಿಂದು–ಮುಂದೆ ನೋಡುತ್ತಿದ್ದಾರೆ.

ಹೊಸ ಶೈಕ್ಷಣಿಕ ವರ್ಷಕ್ಕೆ ಅರ್ಜಿ ಸಲ್ಲಿಸಲು ಅಲ್ಲಿನ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಜನವರಿ ಅಂತ್ಯದವರೆಗೆ ಅವಕಾಶವಿದೆ. ಆದರೆ, ಅರ್ಜಿಗಳೇ ಮಾರಾಟವಾಗಿಲ್ಲ ಎಂದು ಪ್ರವೇಶ ವಿಭಾಗದ ಅಧಿಕಾರಿಗಳು ಕೈ– ಕೈ ಹಿಸುಕಿಕೊಳ್ಳುತ್ತಿದ್ದಾರೆ. ಅಧ್ಯಕ್ಷೀಯ ಚುನಾವಣೆಯ ಫಲಿತಾಂಶ ಹೊರಬಿದ್ದ ಬಳಿಕ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಹಾಕಿದ ಅರ್ಜಿಗಳನ್ನೂ ಹಿಂದಕ್ಕೆ ಪಡೆದಿದ್ದಾರಂತೆ. ಇನ್ನು ಹಲವರು ಪ್ರವೇಶ ಧನ ತುಂಬದೆ ಮುಂದೇನಾಗುವುದೋ ಎಂದು ಕಾದು ನೋಡುತ್ತಿದ್ದಾರೆ.

ಅತ್ಯುಗ್ರ ರಾಷ್ಟ್ರವಾದಿ ಟ್ರಂಪ್, ಅಮೆರಿಕದ ವಲಸೆ ನಿಯಮ ಬಿಗುಗೊಳಿಸುವ ಮಾತುಗಳನ್ನು ಪದೇ ಪದೇ ಆಡಿದ್ದಾರೆ. ಶಿಕ್ಷಣದ ಜತೆ, ಜತೆಗೆ ತಾತ್ಕಾಲಿಕ ಉದ್ಯೋಗವನ್ನೂ ಪಡೆಯಲು ಅವಕಾಶ ಕಲ್ಪಿಸುತ್ತಿದ್ದ ಎಚ್–1ಬಿ ವೀಸಾ ಕೊಡುವ ವಿಷಯದಲ್ಲೂ ಕಠಿಣ ನಿಲುವು ತಳೆದಿದ್ದಾರೆ. ಮುಸ್ಲಿಮರು ದೇಶದೊಳಗೆ ಪ್ರವೇಶಿಸದಂತೆ ನಿರ್ಬಂಧಿಸುವ, ಮೆಕ್ಸಿಕೊ ಗಡಿಯುದ್ದಕ್ಕೂ ತಡೆಗೋಡೆ ನಿರ್ಮಿಸುವ ಮಾತುಗಳನ್ನು ಕೂಡ ಆಡಿದ್ದಾರೆ. ಅವರ ಇದುವರೆಗಿನ ಉಗ್ರ ಮಾತುಗಳು ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆತಂಕದ ಮಡುವಿಗೆ ನೂಕುವಂತೆ ಮಾಡಿವೆ.

ಅಮೆರಿಕದಲ್ಲಿ ಅಧ್ಯಯನಕ್ಕಾಗಿ ಹೋಗಲು ಸಜ್ಜಾಗಿದ್ದ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿ ಸದ್ಯ ಅಲ್ಲಿ ಓದುತ್ತಿರುವವರ ಬೇಗುದಿ ಇನ್ನೂ ಹೆಚ್ಚಾಗಿದೆ. ಹೊಸ ಅಧ್ಯಕ್ಷರ ಅವಧಿಯಲ್ಲಿ ಬರಬಹುದಾದ ಹೊಸ ಕಾನೂನುಗಳಿಂದಾಗಿ ತಮ್ಮ ವ್ಯಾಸಂಗವನ್ನು ಪೂರ್ಣಗೊಳಿಸಲು ಸಾಧ್ಯವಾದೀತೇ ಎಂಬ ಭಯ ಅವರನ್ನು ಕಾಡುತ್ತಿದೆ.

ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಜಯ ಗಳಿಸಿದ ಸುದ್ದಿ ಬರುತ್ತಿದ್ದಂತೆಯೇ ಚೀನಾ, ಭಾರತ ಸೇರಿದಂತೆ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿರುವ ಹಲವು ದೇಶಗಳ ವಿದ್ಯಾರ್ಥಿಗಳು ಬೆಚ್ಚಿಬಿದ್ದಿದ್ದರು. ವಿಶ್ವವಿದ್ಯಾಲಯದ



ತರಗ

